doc-557
T-P-2

Reg No B G 155 7 — 10 —72

In The State **First Golden Jubilee Celebrated Paper 'Satyavadi' daily, Mysore 4**

56th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಪೂರೈಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗಾಂಧಿತತ್ವ ಬೋಧನೆಗೆ ಭಾರತದಲ್ಲಿ ಅಲಕ್ಷತೆ

ವಿದ್ಯಾವಂತ ನಿರುದ್ಯೋಗಿಗಳು

ನವದೆಹಲಿ— ಈಗ ಇರುವ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಇಳಿಸುವದಕ್ಕಾಗಿ ಸರಕಾರ ಕ್ಷಿಪ್ರಪಥದಲ್ಲಿ ವಿಶೇಷ ಸ್ಕೀಂ ಪ್ರಕಟಿಸಲಿದೆ.

★

ಗಾಂಧಿ ತತ್ವ ಬೋಧೆ

ಮಡಕೇರಿ— ಗಾಂಧಿ ಜಯಂತಿಯಂದು ಇಲ್ಲಿಯ ಲಯನ್ಸ್ ಕ್ಲಬ್‌ನಲ್ಲಿ ಭಾಷಣ ಮಾಡಿದ ಪುತ್ತೂರು ಕಾಲೇಜಿನ ಅಧ್ಯಾಪಕರಾದ ಶ್ರೀ ಮಾರ್ಟಿನ್ನರು– ಅನೇಕ ಆನೇರಿಕ ವಿಶ್ವವಿದ್ಯಾಲಯಗಳಲ್ಲಿ ಗಾಂಧಿ ತತ್ವ ಪಾಠಪ್ರವಚನೆಗಳಿದ್ದರೂ, ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಅದು ಅಲಕ್ಷ ವಿಷಯವಾಗಿರುತ್ತಿರುವುದು ಶೋಚನೀಯ ಎಂದು ಹೇಳಿದರು

★

ಇಂದಿರಾ ಗಿರಿ

ಷಿಲಾಂಗ್— ಸುಬನಸಿರಿ ಜಿಲ್ಲೆಯ ಬೆಟ್ಟಗಳ ಹತ್ತಿರ ಕಟ್ಟಲಾಗುವ ಅರುಣಾಚಲ ಪ್ರದೇಶದ ರಾಜಧಾನಿಗೆ " ಇಂದಿರಾ ಗಿರಿ " ಎಂದು ಹೆಸರಿಡಲು ನಿರ್ಧರಿಸಲಾಗಿದೆ

★

1 ಮಿಲಿಯ ತಲೆಬೆಲೆ ಕೇಳಿಕೆ

ಮೆಲ್ಬೋರ್ನ್— ಕ್ಯಾನಲ್‌ವೇನಿನ ಹತ್ತಿರದ ಒಂದು ಪಟ್ಟಣದಲ್ಲಿ ಒಬ್ಬ ಅಯ್ಯು ಭಯಾನಕ ಮನುಷ್ಯನು ಒಬ್ಬ ಸ್ಕೂಲು ಉಪಾಧ್ಯಾಯು ಮತ್ತು 6 ಸ್ಕೂಲಿನ ಹುಡುಗರನ್ನು ಹಿಡಿದಿಟ್ಟುಕೊಂಡು ಅವರ ಬಿಡುಗಡೆಗೆ 1 ಮಿಲಿಯ ಡಾಲರು ಕೇಳುತ್ತಿರುವನೆಂದು ಪೋಲೀಸ್ ವರದಿಯಾಗಿದೆ.

★

ಮೇಲ್ ವ್ಯಾಗೆ ಬೆಂಕಿ

ಅಹಮದಾಬಾದು–ಡೆಲ್ಲಿ ರೈಲ್ವೇ ಮೇಲ್ ವ್ಯಾಗೆ ನಿನ್ನೆ ಬೆಂಕಿ ಬಿದ್ದು ಅಂಚೆ ಪದಾರ್ಥಗಳು ಡ್ಯಾಮೇಜು ಹೊಂದಿವು

ಸರ್ವ ದುಃಖ ನಿವಾರಕ ಯಜ್ಞ

ಮೈಸೂರು— ವೇದಿಕ್ ಫೌಂಡೇಷನ್ ನವರು ಶ್ರೀ ಬನುಮಯ್ಯ ಹೈಸ್ಕೂಲು ಆವರಣದಲ್ಲಿ ತಾ|| 15 ರಿಂದ 17 ರವರೆಗೆ " ಸರ್ವ ದುಃಖ ನಿವಾರಕ ನವಕುಂಡ ಗಾಯಿತ್ರಿ ಮಹಾಯಜ್ಞ " ವನ್ನು ನಡೆಸಲು ನಿರ್ಧರಿಸಿರುವರು — ವಸ್ತುಪ್ರದರ್ಶನದ ಆವರಣದಲ್ಲಿ, ಕುಡಿತ, ಧೂಮಪಾನ, ಸಸ್ಯೇತರ ಆಹಾರ ಸೇವನೆಯ ಕೆಡಕನ್ನು ವಿವರಿಸುವ ಪ್ರದರ್ಶನ ನಡೆಸಲಿದಾರೆ.

80 ಗಂಟೆಗಳಲ್ಲಿ ವಿಶ್ವಪರ್ಯಟಣ

ಬ್ರಸಲ್— ವಿಶ್ವವನ್ನು 80 ಗಂಟೆಗಳಲ್ಲಿ ಸುತ್ತಿಬರುವ ಪಣತೊಟ್ಟು ಹೊರಟ ಬೆಲ್ಜಿಯಂ ಸುದ್ದಿಗಾರ ಪಿಯರಿ ಥೋನಾರ್ 75 ಗಂಟೆ 55 ನಿಮಿಷಗಳಲ್ಲಿ ಸುತ್ತಿಬಂದು ವಿಮಾನದಿಂದ ಇಳಿದನು.

★

ದೇವಿಗೆ ವಜ್ರದ ಕಿರೀಟ

ಮಧುರೈ— 470 ಕ್ಯಾರೆಟ್ಟಿನ, ರೂ. 7 ಲಕ್ಷ ಬೆಲೆಯ ವಜ್ರದ ಕಿರೀಟವನ್ನು ವಿಶಾಲಾಕ್ಷಿ ದೇವಿಗೆ ಅಲಂಕರಿಸಲಾಗುವುದು – ಒಂದು ತಿಂಗಳಲ್ಲಿ ಸಿದ್ಧವಾಗುವದೆನ್ನಲಾಗಿದೆ.

★

ಗಂಡು–ಗಂಡು ಮದುವೆ

ಹೌಸ್ಟ್ (ಟಿಕ್ಸಾಸ್)— ಸಿನಿಮಾ ನಟ ಜೀನ್ ಮ್ಯಾನ್ಸ್‌ಫೀಲ್ಡ್‌ಗೆ ಒಂದು ಕಾಲದಲ್ಲಿ ಕೂದಲನ್ನು ಅಲಂಕರಿಸುತ್ತಿದ್ದ 30 ವರ್ಷದ ವಿಲಿಯಂ ಆರ್ಟ್ ಮತ್ತು ಒಂದು ಪ್ರೌಢ ಶಾಲೆಯ ಮಾಜಿ ಕ್ರೀಡಾಪಟು 33 ವರ್ಷದ ಅರಿಟೋಲಿಯೋ ಮೊಲಿನ ಒಂದು ಪ್ರಾರ್ಥನಾ ಮಂದಿರದಲ್ಲಿ ವಿವಾಹವಾದರು ; ಉಂಗುರಗಳನ್ನು ಅದಲು ಬದಲು ಮಾಡಿಕೊಂಡರು – ಇದು ಅಮೇರಿಕಾದಲ್ಲಿ ಪ್ರಪ್ರಥಮ ಏಕ ಲಿಂಗದ ದಂಪತಿಗಳ ನ್ಯಾಯಸಮ್ಮತ ವಿವಾಹವೆಂದು ತೋಳಿದರು.

ಪಂಜಾಬು ಆದ್ಯಂತ ಪೋಲೀಸು ಬಂದೋಬಸ್ತು

ಚಂಡೀಘರ— ವಾಗಾದಲ್ಲಿ ವಿದ್ಯಾರ್ಥಿಗಳು ಸಿನಿಮಾ ಟೀಕೀಟುಗಳಲ್ಲಿ ರಿಯಾಯಿತಿ ಕೇಳಿಕೆ ಭೀಕರ ಸ್ವರೂಪ ತಾಳಿ ಪೋಲೀಸರು ಗೋಳೀಬಾರು ಮಾಡಿದರು – ಗಲಭೆ ಇತರ ಕಡೆಗಳಿಗೂ ಹರಡುತ್ತಿದ್ದು ರಾಜ್ಯಾದ್ಯಂತ ಪೋಲೀಸು ಬಂದೋಬಸ್ತು ಕೈಗೊಳ್ಳಲಾಗಿದೆ.

ಗಾಂಧಿ ವಾಣಿ

ನನ್ನ ಹೆಂಡತಿ ನನಗೆ ಲೋಕಸುಂದರಿಯಾಗಿ ಕಾಣುವಂತೆ, ನನ್ನ ಹಿಂದೂಧರ್ಮ ನನಗೆ ಶ್ರೇಷ್ಠವಾದ ಧರ್ಮವಾಗಿದೆ ; ಪ್ರತಿಯೊಬ್ಬರೂ ತಮ್ಮತಮ್ಮ ಧರ್ಮಗಳ ಬಗ್ಗೆ ಇದೇ ದೃಷ್ಟಿಕೋನ ಹೊಂದಿರಬೇಕು.

ದಸರಾ ಸಾಂಸ್ಕೃತಿಕ ಉತ್ಸವ
1972

ಮೈಸೂರು ರಾಜ್ಯದ ಕೈಗಾರಿಕಾ ಮಂತ್ರಿಯವರಾದ ಶ್ರೀ **ಎಸ್. ಎಂ. ಕೃಷ್ಣ** ಅವರು

ಮೈಸೂರು ಕ್ರಾಫರ್ಡ್ ಹಾಲ್‌ನಲ್ಲಿ ಇಂದು

8 10 72 ನೇ ಭಾನುವಾರ ಸಂಜೆ 6 ಗಂಟೆಗೆ ದಸರಾ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸುವರು

ಮಿನುಗುತಾರೆ ಶ್ರೀಮತಿ **ಕಲನ** ಕೃಪೆಯಿಟ್ಟು ಅಧ್ಯಕ್ಷತೆ ವಹಿಸುವರು

ಪ್ರಖ್ಯಾತ ಚಿತ್ರ ಕಲಾವಿದೆ ಕುಮಾರಿ **ಹೇಮಾ ಮಾಲಿನಿ** ಅವರಿಂದ

ಭರತನಾಟ್ಯ

ಟಿಕೆಟ್ ದರ : ರೂ. 25, 15, 10 ಮತ್ತು 5

ಟಿಕೆಟ್ ದೊರೆಯುವ ಸ್ಥಳ: 1. ಕ್ರಾಫರ್ಡ್ ಹಾಲ್ 2. ಹೊಟೇಲ್ ಮೆಟ್ರೋಪೋಲ್ 3. ಹೊಟೇಲ್ ದಾಸಪ್ರಕಾಶ್ 4. ಇಂದ್ರ ಭವನ್ ಮತ್ತು 5. ವಾರ್ತಾ ಮತ್ತು ಪ್ರವಾಸೋದ್ಯಮ ಅಸಿಸ್ಟೆಂಟ್ ಡೈರೆಕ್ಟರ್ ರವರ ಕಚೇರಿ, ವಸ್ತುಪ್ರದರ್ಶನ ಕಟ್ಟಡ, ಮೈಸೂರು. [ಫೋನ್ : 23251]

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಿತ್ರೋತ್ಸವದ ಉಪ ಸಮಿತಿ ಅಧ್ಯಕ್ಷರಿಂದ ಪ್ರಕಟಿತ

ಮುಖ್ಯ ಮಂತ್ರಿಗಳ ನುಡಿ

ದೆಹಲಿಯಲ್ಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು– ಶಿಕ್ಷಣದ ಮೂಲಕ ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸುವ ಅವಶ್ಯಕತೆ ಇಂದು ಎಂದಿಗಿಂತಲೂ ಹೆಚ್ಚಾಗಿದೆಯೆಂದು ಹೇಳಿದ್ದರು ; ನಾವೆಲ್ಲರೂ ಮೊದಲು ಭಾರತೀಯರೆಂಬ ಭಾವನೆಯನ್ನು ಬೆಳಸಿಕೊಳ್ಳುವುದನ್ನು ಕಲಿಯಬೇಕೆಂದೂ ಹೇಳಿದರು.

ಅಭಿವೃದ್ಧಿ ಕಾರ್ಯ

ಬೆಂಗಳೂರು— ಭಾರತೀಯ ವೈದ್ಯಶಾಸ್ತ್ರ ಪದ್ಧತಿಯ ಅಭಿವೃದ್ಧಿಗಾಗಿ ಸಲಹೆ ಸೂಚನೆ ನೀಡುವ ವರದಿಯನ್ನು ಸಲ್ಲಿಸುವ ಕಾಲಾವಧಿಯನ್ನು ರಾಜ್ಯ ಸರಕಾರ ಡಿಸೆಂಬರು 7 ರವರೆಗೆ ವಿಸ್ತರಿಸಿದೆ

ಮಿಂಚು ಹೊಡೆತ

ತ್ರಿಚೂರು— ಮಿಂಚು ಹೊಡೆದು, ವರಕ್ಕಾರದಲ್ಲಿ ಹೊಸದಾಗಿ ಕಟ್ಟಿರುವ ಕಟ್ಟಿ ಒಡೆದಿದೆ.

ದಿವ್ಯವಾಣಿ

ಉಪವಾಸ ಮಾಡುವುದು, ತಪಸ್ಸು ಮಾಡುವುದು, ದೊಡ್ಡದು ; ಆದರೆ ತಪ್ಪನ್ನು ಕ್ಷಮಿಸುವುದು ಅವುಗಳಿಗಿಂತ ದೊಡ್ಡದು. — ತಿರುಕುರಾಲ್

ವುಡ್‌ಲಾಂಡ್ 6-10-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಆತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಸಂಗೀತ : ಆರ್. ಡಿ. ಬರ್ಮನ್

ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10–30 ಕ್ಕೆ ಮಲ್ಲಿಮದುವೆ

ಅಪೆರಾ 6 10 72 ರಿಂದ

ಅಪೂರ್ವ ತೆಲುಗು ಚಿತ್ರ

ಇನ್‌ಸ್ಪೆಕ್ಟರ್ ಭಾರ್ಯ

ಪಾತ್ರ : ಕೃಷ್ಣ, ಜ್ಯೋತಿಲಕ್ಷ್ಮಿ, ಚಂದ್ರಕಲ

ಪ್ರತಿ ದಿನ 3 ಪ್ರದರ್ಶನಗಳು

ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore

ದಸರಾ ಮಹೋತ್ಸವ
1972

ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ

ಸ್ಥಳ : ಕ್ರಾಫರ್ಡ್ ಭವನ ಕಾಲ : ಸಂಜೆ ೬-೩೦ ಘಂಟೆಗೆ

ದಿನಾಂಕ	ಕಲಾವಿದರು	ಕಾರ್ಯಕ್ರಮ
8-10-72	ಖ್ಯಾತ ಚಲನಚಿತ್ರ ತಾರೆ ಕುಮಾರಿ ಹೇಮಮಾಲಿನಿ	ಭರತನಾಟ್ಯ
9-10-72	ಶ್ರೀಮತಿ ಎಂ. ಕಿಲ್. ವಸಂತಕುಮಾರಿ	ಕರ್ನಾಟಕ ಸಂಗೀತ
10-10-72	ಶ್ರೀ ಕೆ. ವಿ. ನಾರಾಯಣಸ್ವಾಮಿ	ಕರ್ನಾಟಕ ಸಂಗೀತ
11-10-72	ಶ್ರೀ ಆರ್. ಎಸ್. ಕೇಶವಮೂರ್ತಿ	ವೀಣಾವಾದನ
	ಓಲೇಬಿವೆಂಕಟೇಶ್ವರಲು	ಕರ್ನಾಟಕ ಸಂಗೀತ
12-10-72	ಕುಮಾರಿ ಉಷಾ ದಾತಾರ್	ನೃತ್ಯ
13-10-72	(1) ಬೇಬಿ ಗಾಯಿತ್ರಿ ದೇವಿ 6 ರಿಂದ 8 ರವರೆಗೆ	ವೀಣಾ
	(2) ಸುರೇಖ ಮತ್ತು ಪಾರ್ಟಿ 8-15 ರಿಂದ 10-30	ಭರತನಾಟ್ಯ (ಕೂಚುಪುಡಿ)
14-10-72	ಶ್ರೀ ತಿಟ್ಟೆ ಕೃಷ್ಣ ಐಯ್ಯಂಗಾರ್	ಕರ್ನಾಟಕ ಸಂಗೀತ

ಸ್ಥಳ : ಜೀವಣ್ಣರಾಯನ ಕಟ್ಟೆ

11-10-72	ಹಿನ್ನೆಲೆ ಗಾಯಕ ಶ್ರೀ ಮುಖೇಶ್ ಮತ್ತು ವೃಂದ	ಚಿತ್ರ ಸಂಗೀತ
14-10-72	ಶ್ರೀಮತಿ ಉಷಾ ಉತ್ತುಪ್ (ಉಷಾ ಐಯ್ಯರ್)	ಪಾಪ್ ಸಂಗೀತ

ಟಿಕೆಟ್ ದೊರೆಯುವ ಸ್ಥಳಗಳು

1] ಹೋಟೆಲ್ ಮೆಟ್ರೊಪೋಲ್ 2] ಹೊಟೇಲ್ ದಾಸಪ್ರಕಾಶ್
3] ಇಂದ್ರಭವನ್ 4] ಕ್ರಾಫರ್ಡ್ ಭವನ ಮತ್ತು
5] ಅಸಿಸ್ಟೆಂಟ್ ಡೈರೆಕ್ಟರ್‌ರವರ ಕಛೇರಿ ವಾರ್ತಾ ಇಲಾಖೆ ವಸ್ತುಪ್ರದರ್ಶನ ಕಟ್ಟಡ, ಮೈಸೂರು.

ಮುಂದಿನ ಕಾರ್ಯಕ್ರಮಗಳಿಗೆ ವಿವರ ನಿರೀಕ್ಷಿಸಿ

ಅಧ್ಯಕ್ಷರು
ದಸರಾ ಸಾಂಸ್ಕೃತಿಕ ಮತ್ತು ಚಲಚಿತ್ರೋತ್ಸವ
ಉಪಸಮಿತಿ -ಇವರಿಂದ ಪ್ರಕಟಿತ

Protect the Cow

Contribute Liberally to the National Defence Fund